# ಬುಡಕಟ್ಟು ನ್ಯಾಯ

ಭೂಮಿಯ ಮೇಲಿನ ಬೆಟ್ಟ, ಕಣಿವೆ, ಕಾಡು, ಬಿಸಿಲು, ಬೆಳದಿಂಗಳು, ನಿಸರ್ಗದೊಂದಿಗಿನ ಬದುಕಿನಲ್ಲಿ ನೋವು–ನಲಿವುಗಳನ್ನುಂಡು, ನಾಗರಿಕತೆಯ ತೊಟ್ಟಿಲು ತೂಗಿದವರು ಬುಡಕಟ್ಟು ಸಮುದಾಯಗಳು. ಹೊಳೆ, ನದಿ, ವೃಕ್ಷಗಳೇ ಅವರ ಕಾವ್ಯ. ಬುಡಕಟ್ಟು ಸಮುದಾಯದಿಂದ ಬಂದ ಒಂದು ಹಾಡು ಹೇಳುತ್ತದೆ 'ಪೃಥ್ವಿ ಸುಂದರ, ಅದರ ಮೇಲಿರುವುದೆಲ್ಲಾ ಸುಂದರ.' ನಿಗಿ ನಿಗಿ ಉರಿಯುವ ಜ್ವಾಲೆಯ ನಡುವೆಯೂ ಎಚ್ಚರವಾಗಿರುವ ಇವರು ಶಾಂತಿಯ ಹೂದೋಟದ ನಿರ್ಮಾತೃಗಳು. ಬೇಟೆ ಮತ್ತು ಪಶುಪಾಲಕ ವೃತ್ತಿಗಳಿಂದ ವಿಕಾಸಗೊಂಡ ಬುಡಕಟ್ಟು ಸಮುದಾಯಗಳು ಅನೇಕ ಕಾಲಘಟ್ಟಗಳನ್ನು ಹಾದು, ಆಧುನಿಕೋತ್ತರ ಜಗತ್ತಿನ ನಡುವೆಯೂ ತಮ್ಮ ಆದಿಮ ಸಂಸ್ಕೃತಿ ಮತ್ತು ಸಂಪ್ರದಾಯಗಳ ಅಸ್ಮಿತೆಯನ್ನು ಉಳಿಸಿಕೊಳ್ಳಲು ನಿತ್ಯ ಹೆಣಗುತ್ತಿವೆ.

ಭಾರತದ ಅನೇಕ ಬುಡಕಟ್ಟುಗಳಿಗೆ ಹಸಿವು ಮತ್ತು ಬಡತನಕ್ಕಿಂತ ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದಕ್ಕೇ ಅವರ ಮೊದಲ ಆದ್ಯತೆ. ಜಗತ್ತಿನ ಸೃಷ್ಟಿಯ ಜೊತೆಯಲ್ಲಿಯೇ ತಮ್ಮ ಬುಡಕಟ್ಟುಗಳ ಉಗಮವನ್ನೂ ಕುರಿತು ಹೇಳುವ ಅನೇಕ ಕುಲಕಥನಗಳು ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಇವೆ. ತಮ್ಮ ಬುಡಕಟ್ಟಿನ ಮೂಲಪುರುಷರಾದ 'ಅಂಬೆರಾಯ' ಮತ್ತು 'ತುಂಬೆರಾಯ' ಇವರ ಜೊತೆಯಲ್ಲಿಯೇ ಸೂರ್ಯ ಮತ್ತು ಚಂದ್ರರು ಹುಟ್ಟಿದರು ಎಂದು ಕಾಡುಗೊಲ್ಲರ ಕುಲಕಥನ ಹೇಳುತ್ತದೆ. ಹಾಗೆಯೇ ಕೊರಚ ಸಮುದಾಯವು ದೇವರಿಂದ ತಮ್ಮ ಭಾಷೆಯನ್ನು ಪಡೆದುಕೊಂಡಿದ್ದೇವೆ ಎಂದು ಹೇಳುವ ವಿಶಿಷ್ಟವೆನಿಸುವ ಜನಪದ ಕಥನವೂ ಇದೆ. ಭಾರತದ ಬುಡಕಟ್ಟು ಅಧ್ಯಯನಕ್ಕೆ ತಾತ್ವಿಕ ನೆಲೆಯನ್ನು ರೂಪಿಸಿದ ವೆರಿಯರ್ ಎಲ್ವಿನ್ ಅವರು ಸಂಪಾದಿಸಿರುವ ಬುಡಕಟ್ಟು ಸಮುದಾಯಗಳ ಜನಪದ ಕಥೆಗಳನ್ನು ಅಧ್ಯಯನ ಮಾಡಿದರೆ ಇಡೀ ಸೃಷ್ಟಿಯ ವಾರಸುದಾರಿಕೆಯನ್ನು ಕಲ್ಪನಾ ಶಕ್ತಿಯಿಂದ ತಮ್ಮದೇ ಶೈಲಿಯಲ್ಲಿ ಮಂಡಿಸಿರುವುದು ಆಶ್ಚರ್ಯಕರವಾಗಿದೆ. ಈ ಸಮುದಾಯಗಳು ಸೃಷ್ಟಿಸಿರುವ ಹಾಡು ಮತ್ತು ಕಥನಗಳನ್ನು ಆಳವಾಗಿ ನೋಡಿದರೆ, ಜಗತ್ತಿನಲ್ಲಿ ಈವರೆಗೆ ಬುಡಕಟ್ಟು ಜನರ ಕೈಯಲ್ಲಿ ವಿಕೃತವಾದದ್ದು ಏನೂ ಸೃಷ್ಟಿಯಾಗಿಲ್ಲ ಎನ್ನುವುದು ಅರಿವಿಗೆ ಬರುತ್ತದೆ. 'ಹುಟ್ಟುವುದು ಬದುಕುವುದು ಸಹಕಾರಕ್ಕಾಗಿ ಮತ್ತು ಸಹಬಾಳುವೆಗಾಗಿಯೇ ಹೊರತು ಪೈಪೋಟಿ ನಡೆಸಲು ಅಥವಾ ವಿರೋಧ ಕಟ್ಟಿಕೊಳ್ಳುವುದಕಲ್ಲ' ಎನ್ನುವುದು ಬುಡಕಟ್ಟು ಸಮುದಾಯಗಳು ಸ್ವೀಕರಿಸಿರುವ ಬದುಕಿನ ಪ್ರೇಮ ಮತ್ತು ಸೌಂದರ್ಯವೇ ಆಗಿದೆ. ಸ್ಪರ್ಧೆ, ದ್ವೇಷ, ಸ್ವಾರ್ಥ ಮತ್ತು ಹಿಂಸೆಯನ್ನೇ ಉಸಿರಾಡುವ ಪ್ರಭುತ್ವ ಮತ್ತು ಶಿಷ್ಟ ಸಮಾಜದಿಂದ ಬಿಡುಗಡೆ ಪಡೆಯುವುದು ಅವರ ಪ್ರತಿಯೊಂದು ಕಲೆ, ಕತೆ ಹಾಗೂ ಹಾಡುಗಳಲ್ಲಿದೆ. ಇವೆಲ್ಲವೂ ಅವರ ಸಾಮೂಹಿಕ ಮನಸ್ಸಿನ ಬಯಕೆಯ ಬೀಜವೇ ಆಗಿದೆ. ಇಂತಹ ಪರಿಶುದ್ಧ ಮನಸ್ಸುಗಳಿಗೆ ಮನುಕುಲವೆ ತಿರಸ್ಕರಿಸಿರುವ ದ್ವೇಷ, ಹಿಂಸೆ, ಪ್ರಕೃತಿ ಸಂಪತ್ತನ್ನು ದೋಚುವ ಹಾಗೂ ವಿಭಜನೆಯ ವಿಕೃತ ಪಠ್ಯಗಳನ್ನು ಬೋಧಿಸಬಾರದು.

ಮಾನವಶಾಸ್ತ್ರಜ್ಞ ವೆರಿಯರ್ ಎಲ್ವಿನ್ ಹೇಳುತ್ತಾರೆ: 'ನಾವು ಅವರ ಭಾಷೆಯನ್ನು ಅರ್ಥಮಾಡಿಕೊಳ್ಳಬೇಕು. ತಮ್ಮ ಹಿಂದಿನದರ ಬಗ್ಗೆ ಅವರು ಅಸಹ್ಯ ಪಡುವಂತೆ ಮಾಡಿ ಅದನ್ನು ಬಿಡುವಂತೆ ಮಾಡಬಾರದು. ಹಿಂದಿನದರ ಮೇಲೆ ಹೊಸದನ್ನು ಕಟ್ಟುವುದಕ್ಕೆ ಪ್ರೋತ್ಸಾಹಕೊಟ್ಟು, ಅದು ತನ್ನಷ್ಟಕ್ಕೆ ತಾನೇ ಬೆಳೆಯುವಂತೆ ಮಾಡಬೇಕು'. 'ಬದಲಾವಣೆ' 'ಅಭಿವೃದ್ಧಿ' ಎನ್ನುವ ಮಾದರಿಗಳನ್ನು ಹೇರುವುದು ಅವರ ಸ್ವಾತಂತ್ರ್ಯದ ದಮನವೆಂದೇ ಭಾವಿಸಬೇಕು. ಬುಡಕಟ್ಟು ಜನರನ್ನು ಅವರ ಪಾರಂಪರಿಕ ಸಹಜ ನೆಲೆಗಳಿಂದ ದೂರ ಮಾಡಿದರೆ ಮನುಷ್ಯರಿರಲಿ, ಸಸ್ಯಗಳೂ ಪ್ರಾಣಿಗಳೂ ಸಹ ಬದುಕುಳಿಯಲಾರವು! ಈಶಾನ್ಯಭಾರತ ಹಾಗೂ ಕರ್ನಾಟಕದಲ್ಲಿರುವ ಕೆಲವು ಬುಡಕಟ್ಟುಗಳು ಎದುರಿಸುತ್ತಿರುವ ಸಂಘರ್ಷಗಳನ್ನು ನೋಡಿದರೆ ಇದು ಅರ್ಥವಾದೀತು. ಚೀನಾದ ಜನಪದ ಹಾಡೊಂದು ಇದನ್ನೆಲ್ಲಾ ಕರುಳಿಗೆ ನಾಟುವಂತೆ ಹಾಡುತ್ತದೆ:

ಹೊಲದ ಇಲಿಯೆ ಹೊಲದ ಇಲಿಯೆ / ನಮ್ಮ ಭತ್ತದ ಬೆಳೆಯಿಂದ ದೂರವಿರು / ಮೂರು ವರ್ಷ ನಿನ್ನ ಸೇವೆ ಮಾಡಿದೆವು / ನೀನು ನಮಗೆ ಸದಾ ಕೇಡನ್ನೇ ಬಗೆದೆ / ನಿನ್ನಿಂದ ಆದಷ್ಟೂ ದೂರ ಹೋಗುವೆವು / ಇದರಿಂದ ಸುಂದರ ಸಂತಸದ ಬಯಲುಗಳು / ಆಳುವ ಸದ್ದಿರದ ಚೆಲುವ ನಾಡು.

ಬುಡಕಟ್ಟು ಸಮುದಾಯಗಳು ವರ್ತಮಾನದಲ್ಲಿ ಬದುಕುವುದು ತಮ್ಮ ಗತಕಾಲದ ನಂಬಿಕೆಗಳಲ್ಲಿ, ಆಚರಣೆಗಳಲ್ಲಿ. ಬುಡಕಟ್ಟು ಸಮುದಾಯಗಳ ಸ್ವಾತಂತ್ರ್ಯದ ಸೊಬಗಿನ ನದಿಗಳಿಗೆ ಅತಿರೇಕದ ಕಟ್ಟುಪಾಡುಗಳೇ ನಿಜವಾದ ಅಡೆತಡೆಗಳು! ತತ್ವಜ್ಞಾನಿಯೊಬ್ಬ ಹೇಳುತ್ತಾನೆ 'ನಿಬಂಧನೆಗಳು ಹೆಚ್ಚಿದಂತೆಲ್ಲ ಜನರ ಬಡತನ ಹೆಚ್ಚುತ್ತದೆ'.

ಯಾವುದೇ ಸಮಾಜಕ್ಕೆ ಕಿಂಚಿತ್ತೂ ಪಾಪವೆಸಗದ, ಶಾಂತಿಗೆ ಭಂಗ ತಾರದ, ನಾಗರಿಕ ಸಮಾಜದಿಂದ ಯೋಜನದೂರ ಉಳಿದು, ಸರಳತೆ ಮತ್ತು ನಿಸರ್ಗ ಸ್ನೇಹಿಯಾಗಿ ಬಾಳುತ್ತಿರುವ ಬುಡಕಟ್ಟು ಸಮುದಾಯಗಳ ಬದುಕನ್ನು ಅತಂತ್ರಗೊಳಿಸಲು ಯಾವುದೇ ಪ್ರಭುತ್ವ ಕೈ ಹಾಕುವುದು ಒಪ್ಪುವ ಮಾತಲ್ಲ! ರೋಮಿಲಾ ಥಾಪರ್ ಹೇಳುತ್ತಾರೆ: 'ಪ್ರಗತಿ ಎನ್ನುವುದು ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವುದರಲ್ಲಿ ಹಾಗೂ ಭಿನ್ನಾಭಿಪ್ರಾಯವನ್ನು ಸಹಿಸಿಕೊಳ್ಳುವುದರಲ್ಲಿದೆ'. ಲೋಕವೆಂದರೆ ಸಂಬಂಧಗಳ ಒಂದು ಜಾಲ. ಇಲ್ಲಿ ಎಲ್ಲರೂ ಸಾಮರಸ್ಯದಿಂದ ಇದ್ದರೆ ಮಾತ್ರ ಬದುಕು. ಅಭಿವೃದ್ಧಿಯನ್ನು ಬುಡಕಟ್ಟು ಸಮುದಾಯದ ನಂಬಿಕೆಗಳ ಮನೋಧರ್ಮಕ್ಕೆ ಧಕ್ಕೆ ಬಾರದಹಾಗೆ ಮಾಡುವುದು ಎಲ್ಲ ದೃಷ್ಟಿಯಿಂದಲೂ ಹಿತಕರ. ಈ ಅರಿವು ಯಾವುದೇ ಪ್ರಭುತ್ವಕ್ಕೆ ಇರಬೇಕು ಎನ್ನುವುದು ಎಲ್ಲರ ನಿರೀಕ್ಷೆ. ಸಮುದಾಯಗಳ 'ಸ್ವಾಭಿಮಾನ' ಮತ್ತು 'ವಿಮೋಚನೆ'ಯಂಥ ದೊಡ್ಡ ಆದರ್ಶಗಳನ್ನು ಹತ್ತಿಕ್ಕಬಲ್ಲ ಶಕ್ತಿಗಳು ಇತಿಹಾಸದಲ್ಲಿ ಬಹುಕಾಲ ಉಳಿದಿಲ್ಲ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಯಾರು ಸತ್ಯವನ್ನು ಆಶ್ರಯಿಸುತ್ತಾರೋ ಅವರ ದಾರಿ ಸೋಲುಗಳೆಂಬ ಮುಳ್ಳುಗಳಿಲ್ಲದೆ ಸುಗಮವಾಗಿರುತ್ತದೆ.
  —ಋಗ್ವೇದ
- ಸಹನೆಗಿಂತ ಮಿಗಿಲಾದ ಶಿಸ್ತಿನ ನಿಯಮವಿಲ್ಲ, ಸಹನೆಯು ತಪಗಳಲ್ಲೇ ಶ್ರೇಷ್ಠವಾದುದು.
  —ಗೌತಮ ಬುದ್ಧ
- ಶಾಂತತೆ ನಮ್ಮ ಸಹಜ ಗುಣ. ಅದನ್ನು ಅರಿಯದೆ ಹೊರಗಿನಿಂದ ಎರವಲು ಪಡೆಯಲು ಯತ್ನಿಸುತ್ತೇವೆ. ಇದು ನಮ್ಮೆಲ್ಲ ಚಡಪಡಿಕೆಗಳಿಗೂ ಕಾರಣವಾಗಿಬಿಡುತ್ತದೆ.
  —ರಮಣ ಮಹರ್ಷಿ
- ಆದರ್ಶಗಳು ಪ್ರತಿದಿನ ಪಠಣ ಮಾಡಬೇಕಾದ ಗೊಡ್ಡು ಮಂತ್ರಗಳಲ್ಲ. ಅವು ನಮ್ಮ ಜೀವನದ ಉಸಿರು.
  —ಕುವೆಂಪು
- ಪರಾನುಕರಣೆಯ ಪರಮಾನ್ನಕ್ಕಿಂತ ಸ್ವಸಾಧನೆಯ ಸಾರನ್ನ ಸ್ವಾದಿಷ್ಟ.
  —ಕೆ.ಎಸ್. ನಿಸಾರ್ ಅಹಮದ್
- ಸ್ವಭಾವ ಶುದ್ಧವಾದವನು ಅಧೋಗತಿಗೆ ಹೋಗಲಾರ.
  —ಸೂಕ್ತಿ
- ನಿಮ್ಮ ನಂಬಿಕೆಯಂತೆ ನೀವಾಗುತ್ತೀರಿ. ನಿಮ್ಮನ್ನು ನೀವು ಋಷಿಗಳೆಂದು ನಂಬಿದರೆ ನೀವು ನಾಳೆ ಋಷಿಗಳೇ ಆಗುತ್ತೀರಿ.
  —ಸ್ವಾಮಿ ವಿವೇಕಾನಂದ
- ಪ್ರತಿಯೊಂದು ಸಮಸ್ಯೆಗೆ ಉತ್ತರ ಇರುತ್ತದೆ. ಈ ನಂಬಿಕೆ ಇದ್ದಾಗ ಪ್ರತಿಯೊಂದು ಕಷ್ಟವೂ ಪರಿಹಾರವಾಗುತ್ತದೆ.
  —ಆಲೂರು ವೆಂಕಟರಾಯರು
- ಜಗಳ ಮಾಡಲು ಬಂದವನ ಎದುರು ಮೌನವಾಗು. ಅದು ಜಗಳದ ಬಾಗಿಲನ್ನು ಮುಚ್ಚುತ್ತದೆ.
  —ಎ.ಆರ್. ಕೃಷ್ಣಶಾಸ್ತ್ರಿ